## 27. ಸಂಸತ್ ಕಲಾಪದ ಕೊನೆಯ ದಿನ ಎಂಟು ವಿಧೇಯಕಗಳಿಗೆ ಅಸ್ತು

ಸಂಸತ್‌ನ ಮುಂಗಾರು ಅಧಿವೇಶನದ ಕೊನೆಯ ದಿನ ಎಂಟು ಮಹತ್ವದ ವಿಧೇಯಕಗಳಿಗೆ ಅನುಮೋದನೆ ಲಭಿಸಿದೆ. ವೃತ್ತಿಪರ ಸುರಕ್ಷತೆ, ಆರೋಗ್ಯ ರಕ್ಷಣೆ, ಕೆಲಸ ನಿರ್ವಹಣೆ, ಕೈಗಾರಿಕಾ ಸಂಬಂಧಗಳ ನಿರ್ವಹಣೆ ಹಾಗೂ ಸಾಮಾಜಿಕ ಭದ್ರತೆ ಮತ್ತು ವಿದೇಶಿ ದೇಣಿಗೆ ನಿಯಂತ್ರಣ ವಿಧೇಯಕಗಳು ರಾಜ್ಯಸಭೆಯ ಅನುಮೋದನೆ ಪಡೆದಿವೆ.

ರಾಜ್ಯಸಭೆಯನ್ನು ಅನಿರ್ದಿಷ್ಟಾವಧಿಗೆ ಮುಂದೂಡುವ ಮುನ್ನ ಮಾತನಾಡಿದ ಸಭಾಪತಿ ಎಂ.ವೆಂಕಯ್ಯನಾಯ್ಡು ಅವರು ಎಂಟು ಸದಸ್ಯರನ್ನು ಅಮಾನತ್ತುಗೊಳಿಸಿದ್ದು ಒಳ್ಳೆಯದಲ್ಲ ಎನಿಸಿದರೂ ಅವರ ವರ್ತನೆಯಿಂದಾಗಿ ಅನಿವಾರ್ಯವಾಗಿತ್ತು. ಪ್ರತಿಪಕ್ಷಗಳಿಗೆ ಪ್ರತಿಭಟನೆ ಹಕ್ಕು ಇದೆ. ಆದರೆ ಯಾವ ರೀತಿ ನಡೆಸಬೇಕು ಎನ್ನುವುದನ್ನು ಅರಿತುಕೊಳ್ಳಬೇಕು. ಸದನದ ಘನತೆಗೆ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸಬೇಕಿತ್ತು ಎಂದಿದ್ದಾರೆ.

**5 ಭಾಷೆಗಳಿಗೆ ಅಧಿಕೃತ ಸ್ಥಾನಮಾನ:** ನೂತನವಾಗಿ ಕೇಂದ್ರಾಡಳಿತ ಪ್ರದೇಶದ ಸ್ಥಾನಮಾನ ಪಡೆದಿರುವ ಜಮ್ಮು ಮತ್ತು ಕಾಶ್ಮೀರದಲ್ಲಿ ಕಾಶ್ಮೀರಿ, ಡೋಗ್ರಿ, ಹಿಂದಿ, ಇಂಗ್ಲೀಷ್ ಹಾಗೂ ಉರ್ದು ಭಾಷೆಗಳಿಗೆ ಅಧಿಕೃತ ಭಾಷೆಗಳ ಮಾನ್ಯತೆ ನೀಡುವ ವಿಧೇಯಕಕ್ಕೆ ರಾಜ್ಯಸಭೆಯಲ್ಲಿ ಧ್ವನಿಮತದ ಅನುಮೋದನೆ ಸಿಕ್ಕಿತು. ರಾಜ್ಯದಲ್ಲಿ 1954ರಿಂದ ಕೇವಲ ಉರ್ದು ಮತ್ತು ಇಂಗ್ಲೀಷ್ ಭಾಷೆಯನ್ನು ಅಧಿಕೃತ ಕಾರ್ಯಗಳಿಗಾಗಿ ಬಳಸಲಾಗುತ್ತಿತ್ತು.

**ಅಧಿವೇಶನ 100% ಫಲಪ್ರದ***:* ರಾಜ್ಯಸಭೆಯಲ್ಲಿ 25 ವಿಧೇಯಕಗಳು ಅನುಮೋದನೆ ಪಡೆಯುವುದರ ಜೊತೆಗೆ ಆರು ಇತರ ವಿಧೇಯಕಗಳ ಮಂಡನೆಯಾದ ಹಿನ್ನೆಲೆಯಲ್ಲಿ ಕೊರೋನಾ ಆತಂಕದ ನಡುವಿನ ಮುಂಗಾರು ಅಧಿವೇಶನ ಶೇ.100ರಷ್ಟು ಫಲಪ್ರದವಾಗಿದೆ. ಆದರೆ ಮೇಲ್ಮನೆಯ ಕಲಾಪಗಳನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ.

ಅಕ್ಟೋಬರ್ 1ಕ್ಕೆ ಕೊನೆಗೊಳ್ಳಬೇಕಿದ್ದ ಅಧಿವೇಶನ ಸೆಪ್ಟೆಂಬರ್ 23ಕ್ಕೆ ಅಂತ್ಯಗೊಂಡ ಪರಿಣಾಮ 18ರ ಬದಲು 10 ಕಲಾಪಗಳು ಮಾತ್ರ ನಡೆದವು. ಕಳೆದ ಹಲವು ವರ್ಷಗಳಲ್ಲಿ ವಿಧೇಯಕಗಳ ಚರ್ಚೆಗೆ ಸರಾಸರಿ 28% ಸದನದ ಅವಧಿ ಬಳಕೆಯಾಗಿದೆ. ಆದರೆ ಈ ಬಾರಿ ದಾಖಲೆಯ 58% ಸಮಯ ಬಳಕೆಯಾಗಿರುವುದು ಉತ್ತಮ ಬೆಳವಣಿಗೆ ಎಂದು ಸಭಾಪತಿ ವೆಂಕಯ್ಯನಾಯ್ಡು ಅವರು ಉಲ್ಲೇಖಿಸಿದ್ದಾರೆ.

**ಎನ್‌ಜಿಓ ದೇಣಿಗೆ ಮೇಲೆ ನಿಗಾ:** ಕಾರ್ಮಿಕರಿಗೆ ಸಂಬಂಧಿತ ವಿಧೇಯಕಗಳ ಜೊತೆಗೆ ಅನುಮೋದನೆ ಪಡೆದ ವಿದೇಶಿ ದೇಣಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕದಿಂದಾಗಿ ಇನ್ಮುಂದೆ ಎನ್‌ಜಿಓಗಳ ಪದಾಧಿಕಾರಿಗಳು ನೋಂದಣಿ ವೇಳೆ ತಮ್ಮ ಆಧಾರ್ ಸಂಖ್ಯೆ ನೀಡುವುದು ಕಡ್ಡಾಯವಾಗಿದೆ. ಇದರಿಂದಾಗಿ ಎನ್‌ಜಿಓಗಳ ಬಗ್ಗೆ ತೀವ್ರ ನಿಗಾ ಇರಿಸಲು ಅನುಕೂಲವಾಗಲಿದ್ದು, ಸಾಮಾಜಿಕ ಕಾರ್ಯದಲ್ಲಿ ನೈಜ ರೀತಿಯಲ್ಲಿ ತೊಡಗಿಸಿಕೊಂಡಿರುವ ಎನ್‌ಜಿಓಗಳಿಗೆ ಮತ್ತಷ್ಟು ಬಲ ಸಿಗಲಿದೆ. ವಿದೇಶಿ ದೇಣಿಗೆಯ ಶೇ.20 ರಷ್ಟು (ಮುಂಚೆ ಶೇ.50ಇತ್ತು) ಹಣವನ್ನು ಆಡಳಿತಾತ್ಮಕ ವೆಚ್ಚಗಳಿಗೆ ಬಳಸಿಕೊಳ್ಳಬೇಕು ಎಂದು ವಿಧೇಯಕ ನಿಯಂತ್ರಣ ಹೇರಲಿದೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:24.09.2020